ನಮ್ಮಿಡೀ ಕುಟುಂಬವನ್ನು ಮುಕ್ತಗೊಳಿಸಬೇಕು. ಒಂದು ಅವಕಾಶಕ್ಕಾಗಿ ತಹತಹಿಸುತ್ತಿತ್ತು ಮನಸ್ಸು.

ಆ ದಿನ ಇಷ್ಟು ಬೇಗ ಬರುತ್ತದೆಂದು ನಾನು ನಿರೀಕ್ಷಿಸಿರಲಿಲ್ಲ.

## 3

ಡಾಕ್ಟರ್‌ಸಾಬರು ಸೈಕಲ್ ಕೊಟ್ಟ ಮೇಲೆ ಅದನ್ನು ನಡೆಸುವುದನ್ನು ಕಲಿತುಕೊಂಡಿದ್ದ ಭೀಮಪ್ಪ ಅದನ್ನು ಕಾರಿಗಿಂತ ಸಿಂಗಾರವಾಗಿ ನೋಡಿಕೊಳ್ಳುವ ಖಯಾಲಿಗೆ ಬಿದ್ದಿದ್ದ. ಹ್ಯಾಂಡಲುಗಳಿಗೆ ಮುಳ್ಳುಗಳಂತಹ ರಚನೆ ಹೊಂದಿರುವ, ಕೆಳಗೆ ಕುಚ್ಚು ಬೇರೆ ಇಳಿಬಿದ್ದಿರುವಂಥ ಅತಿ ಮೃದುವಾದ ಹಿಡಿಕೆಗಳು; ಕಟ್ಟಿಗೆಯ ಮಜಬೂತಾದ ಪೆಡಲುಗಳಿಗೆ ಬಿರುಸಾದ ಪ್ಲಾಸ್ಟಿಕ್ಕಿನ ಹೊದಿಕೆಗಳು; ಹ್ಯಾಂಡಲಿನ ಎರಡೂ ಕಡೆ ರೀಯರ್ ವ್ಯೂವ್ ಮಿರರ್‌ಗಳು; ಮುಂದೆ ಒಂದು ಲೈಟ್, ಅದರಿಂದ ಹೊರಟ ವೈರಿಗೆ ಹಿಂದಿನ ಗಾಲಿ ಹತ್ತಿರ ಸಂಪರ್ಕಗೊಂಡಿದ್ದ ಡೈನಮೋ; ಅತಿ ಮೆತ್ತನೆಯ ಸೀಟು; ಮುಂದಿನ ದಂಡದ ಮೇಲೆ ಕೂರುವ ಮಕ್ಕಳಿಗಾಗಿ ಮತ್ತೊಂದು ಪುಟಾಣಿ ಸೀಟು; ಹಿಂದೆ ಮಜಬೂತಾದ ಕ್ಯಾರಿಯರ್ ಸೀಟು; ಬಂದೋಬಸ್ತಾದ ಕೀಲಿ; ಇವೆಲ್ಲಕ್ಕೂ ಕಳಸವಿಟ್ಟಂತೆ ಎರಡೂ ಗಾಲಿಗಳ ಅಷ್ಟೂ ಕಡ್ಡಿಗಳಿಗೆ ಹಾಕಿಸಿದ್ದ ಬಣ್ಣಬಣ್ಣದ ಪ್ಲಾಸ್ಟಿಕ್ಕಿನ ಮಣಿಗಳು. ಸೈಕಲ್ ಸ್ಲೋ ಆಗುತ್ತಿದ್ದಂತೆ ಆ ಮಣಿಗಳು ಕಡ್ಡಿಗಳ ತುದಿಯಿಂದ ಹಬ್‌ನವರೆಗೆ ಜಾರಿಬೀಳುತ್ತ ಒಂದು ವಿಶಿಷ್ಟ ಸ್ವರವನ್ನು ಹೊಮ್ಮಿಸುತ್ತಿದ್ದವು.

ಮಧ್ಯಾಹ್ನದ ಊಟ ಮಾಡ್ತಾ ಇದ್ದೆ. ಸೈಕಲ್ ಚಕ್ರದ ಮಣಿಗಳ ಪುಳುಪುಳು ಸದ್ದಾಯಿತು. ಹಿಂದೆಯೇ ಸ್ಟ್ಯಾಂಡ್ ಹಾಕಿದ ಸದ್ದು. ಓಹ್, ಇನ್ನು ಈ ಸೈಕಲ್ ತಾತನ ಹರಿಕಥೆ ಪುರಾಣಗಳನ್ನೆಲ್ಲ ಕೇಳಿಸಿಕೊಳ್ಳಬೇಕು. ಅಪ್ಪನೇನೋ ಹ್ಞಾಂ ಹ್ಞೂಂ ಇಷ್ಟೇ, ಎರಡೇ ಮಾತಿನ ಮನುಷ್ಯ. ಅಮ್ಮ ಆತನ ಮಾತುಗಳಿಗೆ ಅಪ್ಪ ಅಪ್ಪಾ ಅಂತ ದನಿಗೂಡಿಸುತ್ತ ಅತಿವಿನಯವನ್ನು ಪ್ರದರ್ಶಿಸುವುದು ಮೈ ಉರಿಸುತ್ತಿತ್ತು ನನಗೆ. ಇತ್ತಿತ್ತಲಾಗಿ ಆತ ನನ್ನ ಮೇಲೆ ತನ್ನ ಪುರಾಣ, ರಾಮಾಯಣಗಳ ರಸಪ್ರಶ್ನೆ ಕಾರ್ಯಕ್ರಮವನ್ನು ಹೇರುವ ಹೊಸ ವರಸೆ ಬೇರೆ ಶುರುಮಾಡಿದ್ದ. ಅದರಿಂದ ಮನಸ್ಸಿಗೆ ರೇಜಿಗೆಯಾಗೋದು. ಈಗ ಆತನ ಕೈಯಲ್ಲಿ ಸಿಕ್ಕಿಹಾಕಿಕೊಳ್ಳುವುದಕ್ಕಿಂತ ಹೊರಗೆ ಹೋಗುವುದೇ ಸರಿ. ಆದರೆ, ಇನ್ನೂ ಅರ್ಧ ಊಟ ಬಾಕಿ ಇತ್ತು ನಂದು. ಸೈಕಲ್ ತಾತ ಬಂದವನೇ ಅಪ್ಪನಿಗೆ—

"ಏನ್ ಅಳೆದೇವ್ರು ಎಂಗಾದಪ ಈಗ?" ಅಂದ.

"ಬಾ ಎಪ್ಪಾ... ಊಟ ಮಾಡು ನಿನ್ನ ಮಮ್ಮಗನ ಜತಿಗಿ. ತಾಟು ಹಚ್ಚತೀನಿ. ಗಾ ಇನ್ನೊಂದು ಪಾವಲಿ ಭಾಗದಷ್ಟು ಹಸಿ ಆದ ಗಾಯ. ನಿನ್ನ ದಯದಿಂದ ಬೇಕಾದಷ್ಟು ಆರಾಮಾಗ್ಯಾನ ಈಗ" ಅಂದಳು ಅಮ್ಮ. ಅಪ್ಪ ಆರಾಮಾಗಿದ್ದರಲ್ಲಿ ಆತನಿಗೆ ಟ್ರೀಟ್‌ಮೆಂಟ್ ಕೊಟ್ಟ ನಾಡಗೌಡ ಡಾಕ್ಟರು, ರಕ್ತ ಕೊಟ್ಟ ರವಿಶಂಕರ್ ಸಾಹೇಬರು ಮತ್ತು ಕಣ್ಣಿನ ರೆಪ್ಪೆಯಂತೆ ಆರೈಕೆ ಮಾಡುತ್ತಿದ್ದ ಅಮ್ಮನ ಪಾತ್ರವಿತ್ತಾಗಲೀ ಈತನದೇನೂ ನಯಾಪೈಸೆ ಪಾಲಿರಲಿಲ್ಲ. ರೇಜಿಗೆ ಹುಟ್ಟಿ ಸಿಟ್ಟಿನ ಭರದಲ್ಲಿ ಅಂದೂ ಬಿಟ್ಟೆ. ಅದು ಆತನೊಳಗೆ ಮುಳ್ಳಿನಂತೆ ಮುರಿದುಕೊಂಡಿತು.

"ಏ ಮಮ್ಮಗನೇ, ಬರೇ ಗುಳಿಗಿ ಸೂಜಿಲಿಂದ ಎಲ್ಲ ಆರಾಮಾಗಂಗಿದ್ರೆ ದವಾಖಾನಿಗಳಾಗ ದೇವರ ಫೋಟೊ ಯಾಕಿರುತ್ತಿದ್ವು? ಪೇಶಂಟ್ ಆರಾಮಾಗಬೇಕಾದ್ರೆ ದವಾ ಅರ್ಧ ಕೆಲಸ ಮಾಡುತ್ತ. ದುವಾ ಇನ್ನರ್ಧ ಕೆಲಸ ಮಾಡುತ್ತ ಏನಪ..." ಅಂದ.

ನಾನು ಕೊಂಕು ನಕ್ಕು ತಾಚಿಕಾರ ಪ್ರದರ್ಶಿಸಿದೆ. ಇದು ಇನ್ನೂ ಬಿರುಸಿಗೆ ಬೀಳದು ಬ್ಯಾಡ ಅಂದುಕೊಂಡು ಊಟ ಬಿಟ್ಟು ಕೈ ತೊಳೆದುಕೊಂಡೆ.